ಶ್ರೀ ವಿ. ಎಲ್. ಪಾಟೀಲ್.—ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಈ ರೀತಿ ಉತ್ತರ ಕೊಟ್ಟರೆ ನನಗೆ ದುಃಖವಾಗುತ್ತದೆ.

Q. No. 501 (316)

MR. SPEAKER.— Mr. Ananda Rao, I have to withhold this question because it is too general a question. I could not get an answer. I will take it up next time.

ಕನಕಪುರ ತಾಲ್ಲೂಕು ದೆರಂದಪ್ಪನಹಳ್ಳಿ ಸಂಘದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ.

೩೧೧. ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕನಕಪುರ ತಾಲ್ಲೂಕು ದೆರಂದಪ್ಪನಹಳ್ಳಿ ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ ಇದರ ವ್ಯವಹಾರಗಳನ್ನು ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ವಿಚಾರಣೆ ಮಾಡಿರುವುದು ವಾಸ್ತವವೇ ?

ಆ) ಅನೇಕ ಅವ್ಯವಹಾರಗಳು ಕಂಡು ಬಂದಿದ್ದು ಕಾರಣ ಕೇಳಿ ತಿಳಿಂವಳಿಕೆ ಪತ್ರವನ್ನು ಕೊಟ್ಟಿರುವುದು ವಾಸ್ತವವೆ ಹಾಗಿದ್ದಲ್ಲಿ ಆಪಾದನೆಗಳು ಯಾವುವು ?

ಇ) ಹಾಗಿದ್ದಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮ ಮತ್ತು ಸದ್ಯದ ಪರಿಸ್ಥಿತಿ ಏನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ) ನಿಜ. ಸಂಘಕ್ಕೆ ಭೇಟಿ ನೀಡಿ ಕಾರ್ಯ ಚಟುವಟಿಕೆಗಳನ್ನು ಅವಲೋಕಿಸಿರುತ್ತಾರೆ.

ಆ) ನಿಜ. ಲೋಪದೋಷಗಳು ಈ ಕೆಳಕಂಡಂತಿವೆ.

೧) ಲೆಕ್ಕ ಪುಸ್ತಕಗಳನ್ನು ಸರಿಯಾಗಿ ಬರೆದಿರುವುದಿಲ್ಲ.

೨) ದೊಡ್ಡ ಕಬ್ಬಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದವರಿಂದ ಆರ್ಥಿಕ ನೆರವು ಪಡೆದು ನಿರ್ಮಾಣ ಮಾಡುತ್ತಿರುವ ಗೋದಾಮು ಕಟ್ಟಡವನ್ನು ಪೂರ್ಣಗೊಳಿಸುವುದರಲ್ಲಿ ವಿಫಲರಾಗಿರುವುದು.

೩) ಸಂಘಕ್ಕೆ ವಿಲೀನಗೊಂಡಿರುವ ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವುದರಲ್ಲಿ ಇಬ್ಬರು ಆಡಳಿತ ಮಂಡಳಿ ಸದಸ್ಯರುಗಳು ನ್ಯೂನತೆಗೆ ಕಾರಣರಾಗಿರುವುದು.

೪) ಅಭಾವ ಪೀಡಿತ ಪ್ರದೇಶಗಳ ಅಭಿವೃದ್ಧಿ ಸಂಸ್ಥೆ ಮೂಲಕ ಆರ್ಥಿಕ ನೆರವಿನಿಂದ ಗೋದಾಮು ಕಟ್ಟಡ ಪೂರ್ಣಗೊಳಿಸಲು ವಿಫಲರಾಗಿರುವುದು.

೫) ಉಪ ಸಮಿತಿ ನೇಮಕ ಮಾಡದಿರುವುದು.

೬) ಸಂಘದ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆಗಳಲ್ಲಿ ದಿನಾಂಕ ೨೮-೧೨-೧೯೮೦ ರಂದು ಸುಸ್ತಿಯಾಗಿ ಆಡಳಿತ ಮಂಡಳಿ ಸದಸ್ಯರಾಗಲು ಅನರ್ಹರಾಗಿದ್ದವರನ್ನು ಆಡಳಿತ ಮಂಡಳಿಯ ಸದಸ್ಯರಾಗಿ ಚುನಾಯಿತರಾಗಲು ಅನುಕೂಲ ಮಾಡಿಕೊಟ್ಟಿರುವುದು.

೭) ಸಂಘಕ್ಕೆ ಸುಸ್ತಿಯಾದ ಒಬ್ಬ ಆಡಳಿತ ಸಮಿತಿಯ ಸದಸ್ಯರನ್ನು ಮುಂದುವರಿಸಿಕೊಂಡು ಬಂದಿರುವುದು.

೮) ಸಂಘದ ಆಡಿಟ್ ವರದಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸದೆ ಇರುವುದು.

೯) ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಯಿಂದ ಬಂದಿರುವ ಏಳು ಜನ ಸದ್ಯಸರ ಸಹಾಯಧನ ರೂ. ೫೦೦-೦೦ ಗಳನ್ನು ಸಂಬಂಧಪಟ್ಟವರ ಖಾತೆಗಳಿಗೆ ಜಮಾ ಮಾಡುವುದರಲ್ಲಿ ನಡೆದಿರುವ ಅವ್ಯವಹಾರಗಳು.

೧೦) ೧೯೭೯-೮೦ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಈ ನಿಗದಿತ ವೇಳೆಯನ್ನು ಮೀರಿದ ನಂತರ ಅನುಮತಿ ಇಲ್ಲದೆ ನಡೆಸಿರುವುದು.

೧೧) ಸಂಘದ ಸದಸ್ಯರಾದ ರೈತಾಪಿ ವರ್ಗದವರಿಗೆ ಅತ್ಯವಶ್ಯಕವಾದ ಸಾಲ ಸೌಲಭ್ಯಗಳನ್ನು ಮತ್ತು ಸರಬರಾಜುಗಳನ್ನು ಪೂರೈಸಲು ವಿಫಲರಾಗಿರುವುದು.

೧೨) ಸಂಘದ ಕಾರ್ಯದರ್ಶಿಯು ಸಂಘದ ಕೇಂದ್ರ ಕಾರ್ಯ ಸ್ಥಾನದಲ್ಲಿ ವಾಸವಾಗಿಲ್ಲದಿದ್ದರೂ ಆತನ ಮೇಲೆ ಶಿಸ್ತಿನ ಕ್ರಮ ಜರುಗಿಸದೇ ಇರುವುದು.

೧೩) ಸಹಕಾರ ಸಂಘಗಳ ಕಾನೂನಿಗೆ ಅನುಸಾರವಾಗಿ ರಚಿತವಾಗಿರುವ ನಿಯಮಾವಳಿಗಳ ೧೭ನೇ ನಿಯಮದ ಪ್ರಕಾರ ಸಂಘದ ಸಿಬ್ಬಂದಿ ವರ್ಗ ಮತ್ತು ಅವರ ವೇತನ ಶ್ರೇಣಿಗಳನ್ನು ಒಪ್ಪಿಸಿ ಅನುಮೋದನೆ ಪಡೆಯಲು ತಪ್ಪಿರುವುದು.

೧೪) ಈ ಮೇಲಿನ ಲೋಪದೋಷಗಳ ಮೇಲೆ ತಿಳುವಳಿಕೆ ನೋಟೀಸನ್ನು ಕೊಟ್ಟು ಸಹಕಾರ ಸಂಘಗಳ ಕಾನೂನು ಕಲಂ ೫೦ (೧)ರ ಪ್ರಕಾರ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಅದರ ಸ್ಥಾನದಲ್ಲಿ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದೆಂದು ಕೇಳಲಾಗಿದ್ದಿತು. ನಂತರ ಆಡಳಿತ ಸಮಿತಿಯು ಕಾರ್ಯ ತತ್ಪರತೆಯನ್ನು ನಿಯೋಜಿಸಿಕೊಂಡು ತಪ್ಪುಗಳನ್ನು ತಿದ್ದಿಕೆ ಳ್ಳುವ ದಿಶೆಯಲ್ಲಿ ಕಾರ್ಯೋನ್ಮುಖವಾಗಂವ ಸಂಭವವು ಕಂಡುಬಂದಿತು. ಆಗಿನ ಆಡಳಿತ ಸಮಿತಿಯ ಅವಧಿಯು ಮುಗಿದು ಚುನಾವಣೆ ನಡೆದು ಹೊಸ ಸಮಿತಿಯು ರಚನೆಯಾಗಿರುತ್ತದೆ. ಈಗಿನ ಸಮಿತಿಯನ್ನು ರದ್ದುಗೊಳಿಸುವ ಪ್ರಮೇಯ ಕಂಡು ಬರುತ್ತಿಲ್ಲ.

ಶ್ರೀ ಕೆ. ಜಿ. ಶ್ರೀನಿವಾಸ ಮೂರ್ತಿ.—ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾನು ಹಾಕಿದಾಗ, ಹಿಂದೆ ಇದ್ದ ಅಧ್ಯಕ್ಷರ ಮೇಲೆ ಗುರುತರವಾದ ಆಪಾದನೆ ಮಾಡಿದ್ದೇನೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಜನರಿಗೆ ಒಳ್ಳೆಯದು ಮಾಡುತ್ತೇವೆ, ಅವ್ಯವಹಾರಗಳ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು. ಆದರ ಪ್ರಕಾರ ನಾವು ಅಲ್ಲಿನ ಜನರನ್ನು ಸಂಘಟನೆ ಮಾಡಿ, ಒಂದು ಸಮಿತಿ ಮಾಡಿ ಸಂಬಂಧಪಟ್ಟ ಇಲಾಖೆಯವರ ಮುಂದೆ ದೂರುಗಳನ್ನು ಇಟ್ಟಿವು. ಆ ಬಗ್ಗೆ ರಾಮನಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್‌ರವರು ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಅವರನ್ನು ನೇಮಿಸಲಾಯಿತು. ಆದರೆ ಅವರು ಇದುವರೆವಿಗೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಸಹಕಾರಿ ಇಲಾಖೆಯವರೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ತಪ್ಪು ಮಾಡಿರುವವರಿಗೆ ಶಿಕ್ಷೆ ಆಗಿಲ್ಲ. ಹಿಂದೆ ತಪ್ಪು ಮಾಡಿದವರ ಮೇಲೆ ಸರ್ಕಾರ ತನಿಖೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಆ ಸಂಘವನ್ನು ಪರಿಶೀಲಿಸಿದಾಗ ಯಾವ ರೀತಿಯ ಗುರುತರವಾದ ಆಪಾದನೆಗಳೂ ಕಾಣಿಸಲಿಲ್ಲ. ಅಲ್ಲಿ ಯಾವುದೇ ರೀತಿಯ ದುರ್ವ್ಯವಹಾರ ಆಗಿರುವ ಬಗ್ಗೆ ಗಮನಕ್ಕೆ ಬಂದಿಲ್ಲ. ಈಗ ಅದು ಹೋಗಿ ಹೊಸ ಸಮಿತಿ ಬಂದಿದೆ. ಕಾದು ನೋಡೋಣ.

ಶ್ರೀ ಕೆ. ಜಿ. ಶ್ರೀನಿವಾಸ ಮೂರ್ತಿ.—ತಪ್ಪಿತಸ್ಥರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ. —ಈ ಬಗ್ಗೆ ಹೊಸ ಆಡಳಿತ ಮಂಡಲಿಯವರಿಗೆ ಹೇಳಿದ್ದೇವೆ. ಅವರು ಕ್ರಮ ಕೈಗೊಳ್ಳದೇ ಇದ್ದರೆ ನಾವು ಖಂಡಿತಾ ಕ್ರಮ ತೆಗೆದುಕೊಳ್ಳುತ್ತೇವೆ.

ಮೈಸೂರು ನಗರಾಭಿವೃದ್ಧಿ ಮಂಡಳಿಯ ಟಿ. ಕೆ. ಬಡಾವಣೆ ಮನೆಗಳ ಬಗ್ಗೆ,

೩೧೪. ಶ್ರೀ ಹೆಚ್. ಗಂಗಾಧರನ್ (ಕೃಷ್ಣ ರಾಜಸಾಗರ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ ಸಚಿವರು ದಯವಿಟ್ಟು ಉತ್ತರಿಸುವರೇ ?

(ಎ) ನಗರಾಭಿವೃದ್ಧಿಯು ಈ ಡಬ್ಲ್ಯು,ಎಸ್ ಎಲ್.ಐಜಿ., ಎಂ.ಐ.ಜಿ. ಮತ್ತು ಎಚ್.ಐ.ಜಿ. ಮನೆಗಳನ್ನು ಕಟ್ಟಿದೆಯೋ, ಹಾಗಾದರೆ ಪ್ರತಿ ಗುಂಪಿನಲ್ಲಿ ಕಟ್ಟಿದ ಮನೆಗಳು ಎಷ್ಟು ?